**ಓಎಸ್ ನಂಃ 313/2011        ಪಿ.ಡಬ್ಲ್ಯೂ - 1**

**ದಿನಾಂಕಃ 17.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಎನ್ ವಿ ಆರ್. ವಕೀಲರಿಂದಃ**

ನಿಪಿ 3 ರ ಪ್ರಕಾರ ಪಂಚಾಯಿತಿಯವರಿಂದ ಪರವಾನಿಗೆ ನಿಬಂದನೆಗೆ ಒಳಪಟ್ಟು ಕಟ್ಟಡ ಕಟ್ಟಿರುತ್ತೀರಾ ಎಂದರೆ ಹೌದು. ನಿಪಿ 3 ಪಡೆದುಕೊಳ್ಳುವುದಕ್ಕೂ ಮುನ್ನ ಮನೆ ಕಟ್ಟಲು ಪರವಾನಿಗೆ ಮೊದಲೇ ಪಡೆದಿರುತ್ತೇವೆ ಎಂದು ಹೇಳಿರುತ್ತೀರಿ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ಗೊತ್ತಿಲ್ಲ. ನಿಪಿ 3 ಮತ್ತು 7 ಒಂದೇ ದಿನ ಪಡೆದಿರುತ್ತೀರಿ ಎಂದರೆ ಹೌದು. ನಿಮ್ಮ ತಂದೆ ಒಟ್ಟು ಕುಟುಂಬ ಸದರಿ ಆಸ್ತಿಗೆ ವಿಭಾಗಕ್ಕೆ ದಾವೆ ಸಲ್ಲಿಸಿದ್ದರೂ ಎಂದರೆ ಗೊತ್ತಿಲ್ಲ. ಸದರಿ ದಾವೆ ಆರ್ ಎಸ್ ಎ 2619/2010 ಈಗಲೂ ಉಚ್ಚ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇರುತ್ತದೆ ಎಂದರೆ ನಡಿತಿರಬಹುದು. ನಿಮ್ಮ ತಂದೆ ತೀರಿಕೋಂಡ ನಂತರ ಅವರ ವಾರಸುದಾರರಾಗಿ ನೀವು ಸದರಿ ಆರ್ ಎಸ್ ಎ 2619/2010 ರಲ್ಲಿ ಸೇರಿಕೊಂಡಿರುತ್ತೀರಿ ಎಂದರೆ ಹೌದು. ಪ್ರಸುತ್ತ ದಾವೆಯ ದಾವಾ ಆಸ್ತಿ ಆರ್ ಎಸ್ ಎ 2619/2010 ರಲ್ಲಿ ಸೇರಿರುವುದಿಲ್ಲ ಎಂದರೆ ಇಲ್ಲ. ಪಂಚಾಯಿತಿ ದಾಖಲೆ ಬೇರೆ ಕಂದಾಯ ದಾಖಲಾತಿ ಬೇರೆ ಎಂದರೆ ಹೌದು. ನಿಪಿ 8 ಪಂಚಾಯಿತಿ ದಾಖಲಾತಿ ಅಲ್ಲ ಕಂದಾಯ ದಾಖಲಾತಿ ಎಂದರೆ ಪಂಚಾಯಿತಿಗೆ ಸಂಬಂಧಿಸಿದ ದಾಖಲೆ ಎನ್ನುತ್ತಾರೆ. ನಿಪಿ 8 ರಲ್ಲಿ ತಹಸಿಲ್ದಾರ್ ರವರು ಮಾಡಬೇಕಾಗಿರುತ್ತದೆ ಎಂದು ಇದ್ದರೂ ಸಹ ಕಾರ್ಯ ನಿರ್ವಾಹಣಾ ಅಧಕಾರಿಗಳು ತಾಲೂಕು ಪಂಚಾಯಿತಿ ಎಂದು ಪಂಚಾಯಿತಿ ಸೀಲ್ ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ 8 ರಲ್ಲಿ ತಹಸಿಲ್ದಾರ್ ಎಂದು ಇದ್ದರೂ ಸಹ ಅದರ ಮೇಲೆ ಕಾರ್ಯ ನಿರ್ವಹಣಾ ಅಧಿಕಾರಿಗಳು ತಾಲೂಕು ಪಂಚಾಯಿತಿ ಎಂದು ಸೀಲ್ ಇರುತ್ತದೆ ಎಂದರೆ

ನನಗೆ ಗೊತ್ತಿಲ್ಲ. ಯಾವುದೇ ಸ.ನಂ. ಗಳನ್ನು ನೀವೆಶನಗಳ್ನಾಗಿ ಮಾಡಿ ಹಂಚಲು ಪಂಚಾಯಿತಿ ಯವರಿಗೆ ಅಧಿಕಾರ ಇಲ್ಲ ಗ್ರಾಮ ಠಾಣೇ ಪಂಚಾಯಿತಿಗೆ ಅಧಿಕಾರ ಇರುತ್ತವೆ. ಪಂಚಾಯಿತಿ ದಾಖಲಾತಿಗಳಲ್ಲಿ ಸ.ನಂ.ಗಳು ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ಯಾವುದೇ ಗ್ರಾಮ ಠಾಣಾ ಆಸ್ತಿಯನ್ನು ಖಾತೆ ಮಾಡಬೇಕಾದರೆ ಮುಟೇಶನ್ ಮೂಲಕ ಮಾಡುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ **9** ಮತ್ತು **10** ಕಂದಾಯಗಳ ಬೇಡಿಕೆ ಪುಸ್ತಕ ಎಂದರೆ ಹೌದು. ಸದರಿ ನಿಪಿ **9** ಮತ್ತು **10** ಯಾವ ರೀತಿ ಖಾತೆ ಇರುತ್ತದೆ ಎಂದು ನಮೂದು ಇಲ್ಲ ಎಂದರೆ ಇರುತ್ತವೆ. ನಿಪಿ **9** ರಲ್ಲಿ ಎಲ್ಲರ ಹೆಸರ ಮುಂದೆ ಯಾವ ರೀತಿ ಬಂದಿರುತ್ತದೆ ಎಂದು ನಮೂದು ಇಲ್ಲ ಎಂದರೆ ಸರ್ಕಾರ ಮುಖಾಂತರ ಬಂದರೆ ನಮೂದು ಇರುತ್ತದೆ ಅನುಭವದ ಮುಖಾಂತರ ಬಂದರೆ ಇರುವುದಿಲ್ಲ. ನಿಪಿ **9** ಮತ್ತು **10** ರಲ್ಲಿ ಹಕ್ಕು ಪತ್ರದ ಮುಖಾಂತರ ಖಾತೆ ದಾಖಲೆ ಎಂದು ಮತ್ತು ವಿಸ್ತಿರ್ಣ ಎಂದು ನಮೂದು ಮಾಡಿಸಿರುತ್ತೀರಿ ಎಂದರೆ ಅಧಿಕಾರಿಗಳೇ ಮಾಡಿರುತ್ತಾರೆ. ನಿಪಿ **10, 11, 12, 14** ಎಲ್ಲಿ ಲಭ್ಯವಾಗಿರುತ್ತದೆ ಎಂದು ನಿಮ್ಮ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಹೇಳಿರುತ್ತೇವೆ. ನಿಪಿ **14** ಮನೆಯನ್ನು ಯಾವ ವರ್ಷದಲ್ಲಿ ಕಟ್ಟಿಸಿರುತ್ತೀರಿ ಎಂದರೆ **1994-95** ಇರಬಹುದು. ನೀವು **1996** ರಲ್ಲಿ ಮನೆ ನಿರ್ಮಾಣ ಪರವಾನಿಗೆ ಪಡೆದು **1994-95** ಕಟ್ಟಿಸಿರುತ್ತೀರಿ ಎಂದು ನಿಪಿ **14** ರಲ್ಲಿ ತೋರಿಸಿರುತ್ತೀರಿ ಎಂದರೆ ಆವಾಗಲೇ ಕಟ್ಟಿರುತ್ತಾರೆ ಕಟ್ಟಡ ನಿರ್ಮಾಣ ಆದ ವರ್ಷವನ್ನು ಹಾಕುತ್ತಾರೆ ಎನ್ನುತ್ತಾರೆ. ನಿಮ್ಮ ತಂದೆ ಬದುಕಿರುವಾಗ ಬೇರೆ ಮನೆ ಕಟ್ಟಿರುತ್ತೀರಾ ಎಂದರೆ ಹೌದು. ನಿಪಿ **14** ರಲ್ಲಿ ಕಾಣುವ ಮನೆಯಲ್ಲಿ ವಾಸವಿಲ್ಲ ಎಂದರೆ ಇರುತ್ತೇವೆ. ನೀವು ಸಂಸಾರ ಸಮೇತ ಹೊಸ ಮನೆಯಲ್ಲಿ ವಾಸವಿರುತ್ತೀರಿ ಎಂದರೆ ಇಲ್ಲ. ನಿಮ್ಮ ಮನೆ ಮೇಲೆ ಮತ್ತೊಂದು

ಮಹಡಿ ಮನೆ ಕಟ್ಟುತ್ತಿದ್ದಿರಿ ಎಂದರೆ ಇಲ್ಲ. ಪ್ರತಿವಾದಿಗಳು ಎಷ್ಟು ಅಡಿಗಳಷ್ಟು ಅತಿಕ್ರಮಣ ಮಾಡಿರುತ್ತಾರೆ ಎಂದರೆ ದಕ್ಷಿಣ ಕಡೆ 10 ಅಡಿ ಪೂರ್ವ-ಪಶ್ಚಿಮ ಕಡೆ 30 ಅಡಿಗಳಷ್ಟು ಅತಿಕ್ರಮಣ ಮಾಡಿರುತ್ತಾರೆ ಎಷ್ಟು ವರ್ಷಗಳಿಂದ ಅತಿಕ್ರಮಣ ಮಾಡಿರುತ್ತಾರೆ ಎಂದರೆ ಅತಿಕ್ರಮಣ ಮಾಡಿದಾಗ ದಾವೆಯನ್ನು ಸಲ್ಲಿಸಿರುತ್ತೇವೆ ನೀವು ದಾವೆಯನ್ನು ಹಾಕುವ ಮೊದಲೇ ಪಾಯ ಹಾಕಿದ್ದರು ಎಂದರೆ ಇಲ್ಲ. ಪಾಯ ಹಾಕಿರುವ ಬಗ್ಗೆ ನ್ಯಾಯಾಲಯಕ್ಕೆ ಪೋಟೊಗಳನ್ನು ಕೊಟ್ಟಿರುತ್ತಾರೆ ಎಂದರೆ 2012 ರ ಪೊಟೊಗಳನ್ನು ಕೊಟ್ಟಿರುತ್ತಾರೆ. ಪ್ರತಿವಾದಿ ಮನೆ ಪಾಯ ನಿಮ್ಮ ಮನೆಯ ದಕ್ಷಿಣಕ್ಕೆ ಇರುತ್ತದೆ ಎಂದರೆ ಹೌದು. 2010 ಮತ್ತು 2015 ರಲ್ಲಿ ನೀವು ದಾಖಲಾತಿ ನಿಪಿ 11 ಮತ್ತು 12 ಪಡೆದುಕೊಂಡಿದ್ದರೆ ಅವಾಗಲೇ ಕೊಡುವುತ್ತಿದ್ದಿರಿ ಈಗ ಸದರಿ ದಾಖಲಾತಿ ಸೃಷ್ಟಿ ಮಾಡಿಕೊಂಡು ಬಂದು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೆಶದಿಂದ ನಿಮ್ಮ ಮನೆಯ ದಕ್ಷಿಣಕ್ಕೆ ಇರುವ ಪ್ರತಿವಾದಿಗಳ ಮನೆಯ ಪಾಯ ಸೇರಿಸಿಕೂಂಡು ದಕ್ಷಿಣದ ಕಡೆ ಇರುವ ಚಕ್ಕುಬಂದಿ ಕೊಟ್ಟು ಪ್ರತಿವಾದಿಗೆ ತೊಂದರೆ ಮಾಡಬೇಕೆಂದು ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ದಾಖಲಾತಿಗಳು ಸೃಷ್ಟಿ ಮಾಡಿಕೊಂಡು ಬಂದು ಸಲ್ಲಿಸಿರುತ್ತೀರಿ ಎಂರೆ ಸರಿಯಲ್ಲ. 1994-95 ನೇ ಇಸವಿಯಲ್ಲಿ ನಿಮ್ಮ ತಂದೆ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿ ನಡೆಸುತ್ತಿದರು ಎಂದರೆ ನನಗೆ 10 ವರ್ಷ ಇತ್ತು ನನಗೆ ಗೊತ್ತಿಲ್ಲ. ನಿಮ್ಮ ತಂದೆ ಆರ್ ಎ 54/2002 ರಲ್ಲಿ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಪ್ರಸ್ತುತ ದಾವೆಯ ಆಸ್ತಿ ಅದರಲ್ಲಿ ಇರುವುದಿಲ್ಲ ಎನ್ನುತ್ತಾರೆ. ಸದರಿ ದಾವೆ ವಜಾ ಆದ ಕಾರಣ ಆರ್ ಎಸ್ ಎ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಹೌದು.

ಮರು ವಿಚಾರಣೆ: ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.